## ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 18 ಎಸ್‌ಆರ್‌ಪಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:07.11.2020.

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ,
ಬೆಂಗಳೂರು–560 001.

ಇವರಿಗೆ,

ಎಲ್ಲಾ ಇಲಾಖಾ ಮುಖ್ಯಸ್ಥರು,
ಕರ್ನಾಟಕ ಸರ್ಕಾರ.

ಮಾನ್ಯರೆ,

ವಿಷಯ:– ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು 2018 ರಡಿಯಲ್ಲಿ ಇಲಾಖಾವಾರು ಅನುಸೂಚಿಯನ್ನು ಹೊರಡಿಸುವ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಅಧಿಸೂಚನೆ ಸಂಖ್ಯೆ: ಎಫ್‌ಡಿ 06 ಎಸ್‌ಆರ್‌ಪಿ 2018 ದಿನಾಂಕ: 19.04.2018ರಲ್ಲಿ, ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು 2018ನ್ನು ಹೊರಡಿಸಲಾಗಿದೆ. ಅದರಂತೆ, ಸರ್ಕಾರಿ ನೌಕರರ ವೇತನವನ್ನು 2018ರ ಪರಿಷ್ಕೃತ ವೇತನ ನಿಯಮಗಳಲ್ಲಿ ಸೂಚಿಸಿರುವ ಸಂವಾದಿ ವೇತನ ಶ್ರೇಣಿಗಳಲ್ಲಿ ದಿನಾಂಕ: 01.07.2017ರಿಂದ ಜಾರಿಗೆ ಬರುವಂತೆ ನಿಗದಿಪಡಿಸಲು, ಆ ನಿಯಮಗಳಲ್ಲಿ ಕಛೇರಿ ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಲಾಗಿರುತ್ತದೆ. ಈ ರೀತಿ ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲಿನ ಹುದ್ದೆ/ವೃಂದಗಳಿಗೆ ನಿಗದಿಪಡಿಸಲಾಗಿರುವ 2018ರ ವೇತನ ಶ್ರೇಣಿಗಳನ್ನು ಪ್ರಕಟಿಸುವುದು ಅವಶ್ಯಕವಾಗಿರುತ್ತದೆ. ಆದುದರಿಂದ, ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರು ತಮ್ಮ ತಮ್ಮ ಇಲಾಖೆಗೆ ಸಂಬಂಧಿಸಿದ ಹುದ್ದೆಗಳಿಗೆ/ವೃಂದಗಳಿಗೆ ನಿಗದಿಪಡಿಸಲಾಗಿರುವ ಪರಿಷ್ಕೃತ ವೇತನ ಶ್ರೇಣಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಅಂದರೆ ದಿನಾಂಕ: 01.07.2017ಕ್ಕೆ ಲಭ್ಯವಿದ್ದ ಪ್ರತಿಯೊಂದು ವರ್ಗದ ಹುದ್ದೆಗಳಿಗೆ, 2012ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ನಿಗದಿಪಡಿಸಲಾದ ವೇತನ ಶ್ರೇಣಿ ಹಾಗೂ

ಅದಕ್ಕೆ ಸಂವಾದಿಯಾದ 2018ರ ಪರಿಷ್ಕೃತ ವೇತನ ಶ್ರೇಣಿಗಳನ್ನು ಸ್ಪಷ್ಟವಾಗಿ ಈ ಕೆಳಗೆ ತೋರಿಸಿರುವ ನಮೂನೆಯಲ್ಲಿ ದಿನಾಂಕ:31.12.2020ರೊಳಗಾಗಿ ಆರ್ಥಿಕ ಇಲಾಖೆ (ಸೇವೆಗಳು-2)ಗೆ ಕಳುಹಿಸಿಕೊಡಬೇಕೆಂದು ತಮ್ಮಲ್ಲಿ ಕೋರಲು ನಾನು ನಿರ್ದೇಶಿತಳಾಗಿದ್ದೇನೆ.

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ/ವರ್ಗ | 2012ರ ವೇತನ ಶ್ರೇಣಿ | 2018ರ ವೇತನ ಶ್ರೇಣಿ | ಹುದ್ದೆಯ ಪದನಾಮದಲ್ಲಿ ಬದಲಾವಣೆಯಾಗಿದ್ದಲ್ಲಿ ವಿವರಿಸುವುದು | ವೇತನ ಶ್ರೇಣಿಯಲ್ಲಿ ವಿಶೇಷ ಪರಿಷ್ಕರಣೆ ಸಂಭವಿಸಿದ್ದಲ್ಲಿ ಆಧಾರ ಸಹಿತ ವಿವರಿಸುವುದು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

ನಿಮ್ಮ ಇಲಾಖೆಯ ವ್ಯಾಪ್ತಿಗೆ ಬರುವ ಹುದ್ದೆಗಳಿಗೆ ದಿನಾಂಕ: 01-07-2017ರ ನಂತರ ಯಾವುದೇ ಹಂತದಲ್ಲಿ ಯಾವುದಾದರೂ ಮಾರ್ಪಾಡು ಮಾಡಿದ್ದಲ್ಲಿ, ಅವುಗಳಿಗೆ ಪೂರಕ ದಾಖಲೆಗಳೊಂದಿಗೆ ಮಾಹಿತಿಯನ್ನು ನೀಡುವುದು ಹಾಗೂ ಇಲಾಖೆಯ ವೃಂದ ಬಲಕ್ಕೆ ಸಂಬಂಧಿಸಿದ ಅಧಿಸೂಚನೆ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿಕೃತ ಪ್ರತಿಗಳನ್ನೂ ಸಹ ಒದಗಿಸುವುದು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಹೆಚ್ಚಿನ ವಿವರಗಳು ಹಾಗೂ ಮಾಹಿತಿಗಾಗಿ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲ ತಾಣ www.finance.karnataka.gov.in ರಲ್ಲಿ ಇಲಾಖಾ ದಾಖಲೆಗಳು-ವೇತನ ಆಯೋಗ ಸಂಬಂಧಿತ-ರಡಿಯಲ್ಲಿನ ದಿನಾಂಕ: 24.03.2017ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಎಫ್‌ಡಿ 30 ಎಸ್‌ಆರ್‌ಪಿ 2013ನ್ನು ವೀಕ್ಷಿಸಲು ಸಹ ಸೂಚಿಸಿದೆ.

ಮುಂದುವರೆದು, ದಿನಾಂಕ: 24.03.2017ರ ಅಧಿಸೂಚನೆಯನ್ವಯ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) 2012ರ ನಿಯಮಗಳಿಗೆ ಸೇರ್ಪಡೆ ಮಾಡಲಾದ 5ನೇ ಅನುಸೂಚಿಯಲ್ಲಿ ನಮೂದಿಸಿರುವ ಹುದ್ದೆಗಳು ಮತ್ತು ವೇತನ ಶ್ರೇಣಿಗಳು ಮಾಹಿತಿಗಾಗಿ ಪ್ರಕಟಿಸಲ್ಪಟ್ಟಿರುತ್ತದೆ. ಆದುದರಿಂದ, ಇದನ್ನು ಆಧಾರವಾಗಿರಿಸಿಕೊಳ್ಳದೇ ಸದರಿ ಅಧಿಸೂಚನೆಯ ಮಾದರಿಯಲ್ಲಿ ಇಲಾಖೆಗಳ

ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಹುದ್ದೆಗಳಿಗೆ ನಿಗದಿಪಡಿಸಿರುವ 2012ರ ಪರಿಷ್ಕೃತ ವೇತನ ಶ್ರೇಣಿಗಳಿಗೆ ಸಂವಾದಿ 2018ರ ಪರಿಷ್ಕೃತ ವೇತನ ಶ್ರೇಣಿಗಳ ಮಾಹಿತಿಯನ್ನು ಈ ಮೇಲಿನ ನಮೂನೆಯಲ್ಲಿ ಜರೂರಾಗಿ ಒದಗಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

(ಉಮಾ.ಕೆ.)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-2)